**ಚುನಾವಣಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ**

**ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಅಧ್ಯಕ್ಷ ಸ್ಥಾನದ ಚುನಾವಣೆ-2023,**

**ಸಂ:ಇಎಲ್ಎನ್(2)04/2023-2024** **ದಿನಾಂಕ:14-07-2023**

# ಅಧ್ಯಕ್ಷರ ಚುನಾವಣಾ ಸಭೆಯ ನೋಟೀಸು

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರಡಿಯಲ್ಲಿ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಇದರ ಅಧ್ಯಕ್ಷ ಸ್ಥಾನವು ರಾಜೀನಾಮೆಯಿಂದ ತೆರವಾಗಿರುತ್ತದೆ.

ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿಯ ಚುನಾವಣೆಯನ್ನು ನಡೆಸಲು ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರ ಆದೇಶ ಸಂಖ್ಯೆ:ಸಚುಪ್ರಾ/ಮೈ.ಪ್ರಾ/ಮಂ.ಜಿ/ಖಾಸ್ಥಾ/17/2023-24 ದಿನಾಂಕ:26-06-2023ರಂತೆ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ತೆರವಾಗಿರುವ ಅಧ್ಯಕ್ಷ ಸ್ಥಾನಕ್ಕೆ ಉಳಿದ ಅವಧಿಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು **ಡಾ. ಎಚ್.ಎಲ್.ನಾಗರಾಜ್, ಕೆ.ಎ.ಎಸ್, ಅಪರ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ** ಇವರನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 39ಎ(1) ಮತ್ತು 39ಎಎ(2) ಹಾಗೂ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 13ಇ(1), 14ಎಜಿ(2)ರಂತೆ ನೇಮಕ ಮಾಡಿ ಆದೇಶಿಸಿದೆ. ಮತ್ತು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಧಿಸೂಚನೆ ಸಂಖ್ಯೆ:ಇಎಲ್ಎನ್(2)04/2023-2024 ದಿನಾಂಕ:26-06-2023ರಂತೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಲಾಗಿತ್ತು.

ಆದ್ದರಿಂದ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ತೆರವಾಗಿರುವ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು **ದಿನಾಂಕ:06-07-2023ರ ಗುರುವಾರದಂದು ಮಧ್ಯಾಹ್ನ 1.00ಗಂಟೆಗೆ** ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಆಡಳಿತ ಮಂಡಳಿಯ ಸಭಾಂಗಣದಲ್ಲಿ ರಿಟರ್ನಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲು ನಿಗದಿಪಡಿಸಲಾಗಿತ್ತು. ಸದರಿ ದಿನಾಂಕದಂದು ಆಡಳಿತ ಮಂಡಳಿ ಸಭೆಯು ಕೋರಂ ಇಲ್ಲದ ಕಾರಣ ಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಪ್ರಕರಣ 14-ಎಜೆ(6)ರಂತೆ ಮುಂದೂಡಲಾಗಿತ್ತು.

ಅಧ್ಯಕ್ಷ ಚುನಾವಣೆಯ ಮುಂದುವರೆದ ಪ್ರಕ್ರಿಯೆಯ ಸಭೆಯನ್ನು **ದಿನಾಂಕ:24-07-2023ರಂದು ಸೋಮವಾರ ಬೆಳಿಗ್ಗೆ 10.00 ಗಂಟೆಗೆ** ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಆಡಳಿತ ಮಂಡಳಿಯ ಸಭಾಂಗಣದಲ್ಲಿ ರಿಟರ್ನಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲು ನಿಗದಿಪಡಿಸಿದೆ. ಸದರಿ ಸಭೆಗೆ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಇದರ ನಿರ್ದೇಶಕರುಗಳಾದ ತಾವುಗಳು ತಪ್ಪದೇ ಸಭೆಗೆ ಹಾಜರಾಗಲು ಕೋರಿದೆ.

## ಚುನಾವಣಾ ಸಭೆಯಲ್ಲಿ ನಡೆಸಲಾಗುವ ಕಾರ್ಯಸೂಚಿ

1) ನಿಗದಿತ ದಿನಾಂಕದಂದು ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಇದರ ಉಳಿಕೆ ಅವಧಿಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಗುವುದು.
2) ಸಭೆಯನ್ನು ನಡೆಸಲು ಕೋರಂ ಆಡಳಿತ ಮಂಡಳಿಯ ಒಟ್ಟು ಸದಸ್ಯರ ಸಂಖ್ಯೆಯ ಶೇಕಡ 50ಕ್ಕಿಂತಲೂ ಹೆಚ್ಚಾಗಿರಬೇಕು.
3) ಸಭೆಯು ಪ್ರಾರಂಭವಾದ ಕೂಡಲೇ ಈಗಾಗಲೇ ಸಲ್ಲಿಸಲಾಗಿರುವ ನಾಮಪತ್ರಗಳನ್ನು ಪರಿಶೀಲನೆ ನಡೆಸಿ ವಿವರಗಳನ್ನು ಸಭೆಗೆ ತಿಳಿಸಲಾಗುವುದು ಹಾಗೂ ಚುನಾವಣೆ ನಡೆಸಲಾಗುವುದು.

Scanned with OKEN Scanner

4) ನಾಮಪತ್ರಗಳ ಪರಿಶೀಲನೆಯ ನಂತರ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು 30 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಈ ಅವಧಿಯಲ್ಲಿ ಉಮೇದುವಾರಿಕೆ ಹಿಂತೆಗೆದುಕೊಂಡ ಅಭ್ಯರ್ಥಿಗಳ ವಿವರವನ್ನು ಸಭೆಗೆ ತಿಳಿಸಲಾಗುವುದು. ಒಮ್ಮೆ ನೀಡಲಾದ ಉಮೇದುವಾರಿಕೆ ಹಿಂತೆಗೆದುಕೊಂಡ ನೋಟೀಸನ್ನು ರದ್ದುಪಡಿಸಲು ಅವಕಾಶವಿರುವುದಿಲ್ಲ.

5) ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಅವಶ್ಯವಿದ್ದಲ್ಲಿ ರಹಸ್ಯ ಮತಪತ್ರದ ಮೂಲಕ ರಿಟರ್ನಿಂಗ್ ಅಧಿಕಾರಿಯು ಒದಗಿಸುವ(X) ಗುರುತಿನ ರಬ್ಬರ್ ಮೊಹರಿನ ಮೂಲಕ ಮತದಾನ ನಡೆಸಲಾಗುವುದು. ಈ ಗುರುತನ್ನು ಹೊರತುಪಡಿಸಿ ಬೇರೆ ಯಾವುದೇ ಗುರುತನ್ನು ನಮೂದಿಸಿ ಮತದಾನ ಮಾಡಿದಲ್ಲಿ ಅಂತಹ ಮತಪತ್ರವನ್ನು ತಿರಸ್ಕೃತವೆಂದು ಪರಿಗಣಿಸಲಾಗುವುದು.

6) ಮತದಾನದ ನಂತರ ಮತ ಎಣಿಕೆ ನಡೆಸಿ ಚಲಾಯಿಸಲ್ಪಟ್ಟ ಮತಗಳಲ್ಲಿ ಅತಿ ಹೆಚ್ಚು ಮತಪಡೆದ ಅಭ್ಯರ್ಥಿಯನ್ನು ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿರುವರೆಂದು ಘೋಷಿಸಲಾಗುವುದು. ಒಂದು ವೇಳೆ ಅಭ್ಯರ್ಥಿಗಳು ಸಮಾನ ಮತಗಳನ್ನು ಪಡೆದಿದ್ದಲ್ಲಿ ಹಾಜರಿದ್ದ ಸದಸ್ಯರ ಸಮಕ್ಷಮ ಚೀಟಿ ಎತ್ತುವ ಮೂಲಕ ವಿಜೇತರನ್ನು ನಿರ್ಧರಿಸಲಾಗುವುದು.

ದಿನಾಂಕ:14-07-2023
ಸ್ಥಳ: ಮಂಡ್ಯ

(ಡಾ. ಎಚ್.ಎಲ್.ನಾಗರಾಜ್)
ರಿಟರ್ನಿಂಗ್ ಆಫೀಸರ್
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಗೆಜ್ಜಲಗೆರೆ,
ಹಾಗೂ ಅಪರ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ

Scanned with OKEN Scanner